ದಿನಾಂಕ 11-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

1. ನಾನು ಈ ದಾವೆಯನ್ನು ಪರವಾನಿಗೆಗೆ ಸಂಬಂಧಿಸಿದಂತೆ ಪ್ರತಿವಾದಿಗಳಾದ ಪ್ರಕಾಶ, ಅನಿಲ ಮತ್ತು ನವೀನ ರವರ ಮೇಲೆ ಸಲ್ಲಿಸಿದ್ದೇನೆ. ದಾವಾ ಆಸ್ತಿಯ ಸ ನಂಃ 90 ಅ/6 ಅದರ ಒಟ್ಟು ವಿಸ್ತೀರ್ಣ 5 ಎಕರೆ 14 ಗುಂಟೆ ಇದ್ದು, ಅದರ ಪೈಕಿ ದಾವಾ ಆಸ್ತಿಯು 6 ಗುಂಟೆ ಇರುತ್ತದೆ. ಒಟ್ಟು ಕ್ಷೇತ್ರ 5 ಎಕರೆ 14 ಗುಂಟೆ ಜಮೀನಿನಲ್ಲಿ 2 ಎಕರೆ 23 ಗುಂಟೆ 7 ಆಣೆ ನನ್ನ ಹೆಸರಿನಲ್ಲಿದೆ. ಸದರಿ ಒಟ್ಟು 5 ಎಕರೆ 14 ಗುಂಟೆ ಜಮೀನಿನ ಪೈಕಿ ನನ್ನ ಹೆಸರಿನಲ್ಲಿ ಇರುವ ಜಮೀನನ್ನು ಹೊರತುಪಡಿಸಿ ಹಲವರಿಗೆ ಮಾರಾಟ ಮಾಡಿದ್ದು, ಯಾರಿಗೆ ಮತ್ತು ಎಷ್ಟು ಪ್ರತಿಫಲಕ್ಕೆ ಮಾರಾಟ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಾನು ಮತ್ತು ನನ್ನ ತಾಯಿ ಒಟ್ಟಿಗೆ ಸೇರಿ ಮಾರಾಟ ಮಾಡಿರುತ್ತೇವೆ. ನಾನು ಮತ್ತು ನನ್ನ ತಾಯಿ ಸುಮಾರು 23 ಜನರಿಗೆ ಮಾರಾಟ ಮಾಡಿರುತ್ತೇವೆ. ನಾನು ಮಾರಾಟ ಮಾಡಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಖರೀದಿದಾರರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಬಂದಿರುತ್ತವೆ. ಸ ನಂಃ 90 ಅ/6 ರ ಜಮೀನಿಗೆ ಸಂಬಂಧಿಸಿದಂತೆ ಒಟ್ಟು ಒಂದೇ ಪಹಣಿ ಪತ್ರಿಕೆಯಲ್ಲಿ 25 ಪುಟಗಳು ಇರುತ್ತವೆ ಎಂದರೆ ಸರಿ. ನಾನು ಸದರಿ ಜಮೀನಿಗೆ ಸಂಬಂಧಿಸಿದಂತಹ ಕೇವಲ 2 ಪುಟಗಳುಳ್ಳ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಉಳಿಕೆ 23 ಪುಟಗಳ ಪಹಣಿ ಪತ್ರಿಕೆಯಲ್ಲಿ ನಾನು ಖರೀದಿ ಕೊಟ್ಟಿರುವ ಜಮೀನಿಗೆ ಸಂಬಂಧಿಸಿದ ಖರೀದಿದಾರರ ಹೆಸರುಗಳು ಇರುವುದರಿಂದ ಅವುಗಳನ್ನು ಹಾಜರುಪಡಿಸಿರುವುದಿಲ್ಲ.

2. ದಾವಾ ಸರ್ವೇ ನಂಬರ ಜಮೀನಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯ ಖಾತೆಯು ಇರುವುದಿಲ್ಲ. ನಾನು ವಾದ ಪತ್ರದ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಚದುರ

ಅಡಿಗಳಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ತೋರಿಸಿರುವುದಿಲ್ಲ. ದಾವಾ ಆಸ್ತಿಯ ಅಳತೆ ಪೂ-ಪ- 120 ಅಡಿಗಳು ಮತ್ತು ಉ-ದ- 43 ಅಡಿಗಳು ಇರುತ್ತವೆ. ಸದರಿ ಅಳತೆಯನ್ನು ನಾನೇ ಅಂದಾಜಿನ ಮೇಲೆ ಅಳತೆ ಮಾಡಿದ್ದು, ಇತರ ಸರ್ವೇ ಅಧಿಕಾರಿಗಳಿಂದ ಅಳತೆ ಮಾಡಿಸಿರುವುದಿಲ್ಲ. ದಾವಾ ಆಸ್ತಿಯ  ದ-ಪಕ್ಕೀರಪ್ಪ ತಂದೆ ಪಕ್ಕೀರಪ್ಪ ತಳವಾರವರ ಜಮೀನು, ಉ- ನನಗೆ ಉಳಿದ ಜಮೀನು, ಪೂ- ಪಂಚಾಯಿತಿ ರಸ್ತೆ ಮತ್ತು ಪ- ಶಿವಕ್ಕ ಮತ್ತು ಶೇಖಪ್ಪ ರವರ ಜಮೀನುಗಳು ಇವೆ. ಪೂರ್ವಕ್ಕೆ ಇರುವ ಪಂಚಾಯಿತಿ ರಸ್ತೆಯು ನನ್ನ ಜಮೀನಿನಲ್ಲಿ ಮಾಡಿದ್ದು, ಮೂಲತಃ ಅದು ಪಂಚಾಯಿತಿ ರಸ್ತೆ ಇರಲಿಲ್ಲ ಎಂದರೆ ಸರಿ. ನಾನು ಒಟ್ಟು ಜಮೀನಿನ ಪೈಕಿ ಹಲವರಿಗೆ ತುಂಡು ತುಂಡಾಗಿ ಜಾಗವನ್ನು ಮಾರಾಟ ಮಾಡಿದ ಕಾರಣಕ್ಕೆ ಪಂಚಾಯಿತಿಯ ಅಧಿಕಾರಿಗಳು ರಸ್ತೆಯನ್ನು ಬಿಡಬೇಕು ಎಂಬ ಕಾರಣಕ್ಕೆ ಸದರಿ ಪಂಚಾಯಿತಿ ರಸ್ತೆ ನಿರ್ಮಿತವಾಗಿರುತ್ತದೆ.

3. ದಾವಾ ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ ನಾನು ಹಲವಾರು ಖರೀದಿದಾರರಿಗೆ 4 ಗುಂಟೆ, 8 ಗುಂಟೆ, 5 ಗುಂಟೆ ಮತ್ತು 6 ಗುಂಟೆ ಮತ್ತು ಇತರ ವಿವಿಧ ರೀತಿಯ ಅಳತೆಗಳುಳ್ಳ ಜಾಗವನ್ನು ಮಾರಾಟ ಮಾಡಿರುತ್ತೇನೆ. ದಾವಾ ಜಮೀನನ್ನು ಮಾರಾಟ ಮಾಡುವ ಪೂರ್ವದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಬಿನ್ ಶೇತ್ಕಿ ಆದೇಶ ಪಡೆದಿರುವುದಿಲ್ಲ. ನಾನು ಮಾರಾಟ ಮಾಡುವ ಸಂದರ್ಭದಲ್ಲಿ ಖರೀದಿದಾರರು ನೇರವಾಗಿ ಕ್ರಯ ಪತ್ರವನ್ನು ಮಾಡಿಕೊಂಡಿದ್ದು, ಕ್ರಯದ ಕರಾರು ಪತ್ರಗಳು ಆಗಿರುವುದಿಲ್ಲ. ನಾವು ಮಾರಾಟ ಮಾಡಿದ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಾಯಿ ಜೀವಿತ ಇರುವವರೆಗೂ ಜಂಟಿಯಾಗಿ ಮಾರಾಟ ಮಾಡಿರುತ್ತೇವೆ. ದಾವಾ ಸ ನಂಃ 90 ಅ/6 ರ ಜಮೀನಿನಲ್ಲಿ ಕೆಲವರು ಖರೀದಿ ಪತ್ರ ಇಲ್ಲದೇ ಖರೀದಿ ಕರಾರಿನ ಅಡಿಯಲ್ಲಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಸ್ವಲ್ಪ ಜಾಗಗಳನ್ನು ಖರೀದಿಸಿದ ಖರೀದಿದಾರರು ತಮ್ಮ ಜಾಗಗಳಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಿರುತ್ತಾರೆ.

4. ದಾವಾ ಸ ನಂಃ 90 ಅ/6 ಮೂಲತಃ ನನ್ನ ತಂದೆಯ ಜಮೀನಾಗಿತ್ತು. ಅನ್ನಪೂರ್ಣ ಅಲಿಯಾಸ್ ಕಲಾವತಿ ಎಂಬುವವರು ನನ್ನ ಮತ್ತು ನನ್ನ ತಾಯಿಯ ವಿರುದ್ಧ ಅಸಲು ದಾವಾ ಸಂಃ 718/2002 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನನ್ನ ತಂಗಿ ಅನ್ನಪೂರ್ಣ ರವರು ದಾಖಲಿಸುವ ಪೂರ್ವದಲ್ಲಿ ಸ ನಂಃ 90 ಅ/6 ಜಮೀನಿನಲ್ಲಿ ಒಂದಿಷ್ಟು ಜಾಗವನ್ನು ಮಾರಾಟ ಮಾಡಿದ್ದೆವು ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಾವು ಮಾರಾಟ ಮಾಡುತ್ತಿದ್ದೇವೆ ಎಂದು ಹಿಸ್ಸೇಯನ್ನು ಕೋರಿ ನನ್ನ ತಂಗಿ ಸದರಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಕೆಗೂ ಸಹ ನಾವು ಮಾರಾಟ ಮಾಡುವ ವಿಷಯ ಗೊತ್ತಿತ್ತು ಮತ್ತು ಸದರಿ ಮಾರಾಟ ವನ್ನು ಆಕೆಯ ಮದುವೆಯ ಖರ್ಚಿಗಾಗಿ ಮಾರಾಟ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಂಗಿಯ ಮದುವೆಯು 1999 ರಲ್ಲಿ ಆಗಿರುತ್ತದೆ. ನನ್ನ ತಂಗಿಯ ಮದುವೆ ಆದ 6 ತಿಂಗಳ ನಂತರ ನನ್ನ ಮದುವೆಯು ಆಗಿರುತ್ತದೆ. 12-06-1999 ರಲ್ಲಿ ನನ್ನ ಮದುವೆಯು ನೆರವೇರಿರುತ್ತದೆ. ನನ್ನ ಮತ್ತು ನನ್ನ ತಂಗಿಯ ಮದುವೆಯ ಸಮಯದಲ್ಲಿ ನನ್ನ ತಂದೆ ಜೀವಂತ ಇರಲಿಲ್ಲ.

5. ನನ್ನ ಗಂಡ ಹಿರೇಕೆರೂರು ತಾಲೂಕಿನ ಕೋಡ ಗ್ರಾಮದವರು. ಸದರಿ ಗ್ರಾಮವನ್ನು ಬಿಟ್ಟು ನನ್ನ ಗಂಡ ಹೋತನಹಳ್ಳಿ ಗ್ರಾಮದಲ್ಲೇ ಖಾಯಂ ಆಗಿ ವಾಸವಿದ್ದರು ಎಂದರೆ ಸರಿ. ನನ್ನ ಗಂಡ ಹೋತನಹಳ್ಳಿ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತಿದ್ದರು ಎಂದರೆ ಸರಿ. ಸದರಿ ಚುನಾವಣೆಯಲ್ಲಿ ನನ್ನ ಗಂಡ ಆಯ್ಕೆ ಆಗಿ 5 ವರ್ಷಗಳ ಕಾಲ ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನಾನು, ತಾಯಿ ಮತ್ತು ತಂಗಿ ವಿಪಿಸಿ ಆಸ್ತಿ ಸಂಃ152 ಮತ್ತು 149 ರ ಆಸ್ತಿಗಳಲ್ಲಿ ಎರಡೂ ಕಡೆ ವಾಸವಿದ್ದೆವು. ಸದರಿ ಎರಡು ಮನೆಗಳು ಹಂಚಿನ ಮನೆಗಳು ಎಂದರೆ ಸರಿ. ನನ್ನ ತಂಗಿ ಮದುವೆ ಆದ ನಂತರ ಗಂಡನ ಮನೆಯಲ್ಲಿಯೇ ಖಾಯಂ ಆಗಿ ವಾಸವಿದ್ದಾರೆ ಎಂದರೆ ಸರಿ. ಸದರಿ ವಿಪಿಸಿ ಆಸ್ತಿಗಳನ್ನು ನಾನು ಮತ್ತು ನನ್ನ ತಾಯಿ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ಮನೆಗಳಲ್ಲಿಯೇ ನಾವು ಖಾಯಂ ವಾಸವಾಗಿದ್ದೇವೆ ಎಂದರೆ ಸರಿ.

6. ವಾದ ಪತ್ರದೊಂದಿಗೆ ಹಸ್ತ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ಹಂಚಿನ ಮನೆ, ದನದ ಕೊಟ್ಟಿಗೆ, ತಗಡಿನ ಶೆಡ್ಡು, ಟ್ರಾಕ್ಟರ್ ಶೆಡ್ಡು ಮತ್ತು ಹಿತ್ತಲು ಜಾಗೆ ಇರುತ್ತದೆ. ನನ್ನ ಹೆಸರಿನಲ್ಲಿ ಟ್ರಾಕ್ಟರ್ ಇರುತ್ತದೆ. ನಿ.ಪಿ-2 ರಲ್ಲಿ ಕಾಣುವ ಮನೆಯು ನನ್ನದೇ ಆಗಿರುತ್ತದೆ. ಅದರಲ್ಲಿ ಕಾಣುವ ಮನೆಯನ್ನು ಸುಮಾರು 20 ವರ್ಷದ ಹಿಂದೆಯೇ ನಿರ್ಮಿಸಲಾಗಿರುತ್ತದೆ. ಟ್ರಾಕ್ಟರನ್ನು 2011 ನೇ ಇಸವಿಯಲ್ಲಿ ಖರೀದಿಸಿರುತ್ತೇನೆ. ನಿ.ಪಿ-2 ರ ಛಾಯಾ ಚಿತ್ರದಲ್ಲಿ ಕಾಣುವ ಮನೆಯು ಸ ನಂಃ 90 ಅ/6 ರ ಜಮೀನಿನಲ್ಲಿ ಇದೆ. ಪ್ರಸ್ತುತ ದಾವೆಯನ್ನು ಸದರಿ ಛಾಯಾ ಚಿತ್ರದಲ್ಲಿ ಕಾಣುವ ಮನೆ, ಅದರ ಸುತ್ತಮುತ್ತಲೂ ಇರುವ ಟ್ರಾಕ್ಟರ್ ಶೆಡ್ಡು, ದನದ ಕೊಟ್ಟಿಗೆ ಮತ್ತು ಹಿತ್ತಲು ಜಾಗದ ಸಂಬಂಧವಾಗಿ ಸಲ್ಲಿಸಿದ್ದೇನೆ. ಸದರಿ ಛಾಯಾ ಚಿತ್ರದಲ್ಲಿ ಕಾಣುವ ಮನೆಯನ್ನು ನಾನು ಮತ್ತು ನನ್ನ ಗಂಡ ಒಟ್ಟಿಗೆ ಸೇರಿ ಕಟ್ಟಿಸಿರುತ್ತೇವೆ. ಮನೆ ಇರುವ ಜಾಗವು ಕೃಷಿ ಜಮೀನಾಗಿದ್ದು, ಕೃಷಿ ಜಮೀನಿನಲ್ಲಿ ಮನೆಯನ್ನು ಕಟ್ಟಲು ಸೂಕ್ತ ಪರವಾನಿಗೆಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವುದಿಲ್ಲ. ಛಾಯಾ ಚಿತ್ರದಲ್ಲಿ ಕಾಣುವ ಮನೆಗೆ ಗ್ರಾಮ ಪಂಚಾಯಿತಿಯವರು ಸಂಖ್ಯೆಯನ್ನು ನೀಡಿರುವುದಿಲ್ಲ. ಸದರಿ ಮನೆಗೆ ನೀರಿನ ವ್ಯವಸ್ಥೆ ಮತ್ತು ವಿದ್ಯುತ್ ವ್ಯವಸ್ಥೆ ಇದೆ ಎಂದರೆ ಸರಿ. ನೀರಿನ ವ್ಯವಸ್ಥೆಯನ್ನು ಸಂಬಂಧಪಟ್ಟ ಪಂಚಾಯಿತಿಯವರು ನೀಡಿದ್ದು, ಅದೇ ರೀತಿ ವಿದ್ಯುತ್ ವ್ಯವಸ್ಥೆಯನ್ನು ಸಂಬಂಧಪಟ್ಟ ಕೆ.ಇ.ಬಿ ಕಛೇರಿಯಿಂದ ಪಡೆದುಕೊಂಡಿರುತ್ತೇನೆ. ನೀರಿನ ವ್ಯವಸ್ಥೆ ಮತ್ತು ವಿದ್ಯುತ್ ವ್ಯವಸ್ಥೆಯನ್ನು ನಿ.ಪಿ-2 ರಲ್ಲಿ ಕಾಣುವ ಮನೆಗೆ ಒದಗಿಸುವಂತೆ ಕೋರಿ ನಾವೇ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತೇವೆ. ಸದರಿ ಕೋರಿಕೆಯ ಅರ್ಜಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನೀರಿನ ವ್ಯವಸ್ಥೆ ಮತ್ತು ವಿದ್ಯುತ್ ವ್ಯವಸ್ಥೆಯನ್ನು ಪಡೆದುಕೊಳ್ಳಲು ನಾನು ಹೇಳುವಂತೆ ಅರ್ಜಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

7. ನಮ್ಮ ಗ್ರಾಮದಲ್ಲಿ ಮಲ್ಲಪ್ಪ ಪುಟ್ಟಪ್ಪ ಮೂಡೂರು ಎಂಬ ವ್ಯಕ್ತಿ ಇದ್ದಾರೆ ಎಂದರೆ ಸರಿ. ಆತನು ಮೊದಲಿಗೆ ವಕೀಲ ವೃತ್ತಿಯನ್ನು ಮಾಡುತ್ತಿದ್ದು ಪ್ರಸ್ತುತ ಬಿಟ್ಟಿರುತ್ತಾರೆ ಎಂದರೆ ಸರಿ. ಸದರಿ ವಕೀಲರಿಗೂ ಸಹ 2001-02 ನೇ ಇಸವಿಯಲ್ಲಿ ದಾವಾ ಜಮೀನಿನಲ್ಲಿ ಸ್ವಲ್ಪ ಜಾಗಕ್ಕೆ ಕ್ರಯದ ಕರಾರು ಮಾಡಿಕೊಟ್ಟಿದ್ದೆ ಎಂದರೆ ಸರಿ. ಆತನಿಗೆ 5 ಗುಂಟೆ ಜಮೀನನ್ನು ಮಾರಾಟ ಮಾಡುವುದಾಗಿ ಕ್ರಯದ ಕರಾರು ಮಾಡಿಕೊಟ್ಟಿದ್ದೆ.

8. ಅಸಲು ದಾವಾ ಸಂಃ 718/2002 ರಲ್ಲಿ ಆದ ರಾಜಿಯ ಪ್ರಕಾರ ದಾವಾ ಸ ನಂಃ 90ಅ/6 ರ ಜಮೀನಿನಲ್ಲಿ 2 ಎಕರೆ 23 ಗುಂಟೆ, ಸ ನಂಃ 90ಅ/10 ರ ಜಮೀನಿನಲ್ಲಿ 1 ಎಕರೆ 32 ಗುಂಟೆ ಸ ನಂಃ 47 ರ ಜಮೀನಿನಲ್ಲಿ 3 ಎಕರೆ 11 ಗುಂಟೆ ಮತ್ತು ಆಸ್ತಿ ಸಂಃ 152 ರಲ್ಲಿ ಕೆಂಪು ಹಂಚಿನ ಮನೆಯು ನನ್ನ ಹಿಸ್ಸೇಗೆ ಬಂದಿರುತ್ತದೆ. ನಾನು 2002-03 ನೇ ಇಸವಿಯಲ್ಲಿ ನನ್ನ ಸಹಿಯನ್ನು ಆರ್.ವಿ ಪಾಟೀಲ ಎಂದು ಇಂಗ್ಲೀಷ್ ಭಾಷೆಯಲ್ಲಿ ಮಾಡುತ್ತಿದ್ದೆ. ನನ್ನ ತಾಯಿಯು ಸಹ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು. ಸಾಕ್ಷಿಗೆ ದಿಃ 08-05-1999 ರ ಜಮೀನು ಖರೀದಿ ಸಂಚಕಾರ ಪತ್ರ ಎಂಬ ಛಾಪಾ ಕಾಗದದ ಮೇಲೆ ಬರೆದಿರುವ ದಾಖಲೆಯನ್ನು ತೋರಿಸಿ ಅದರಲ್ಲಿ ಸಹಿ ಎಂಬ ಕೆಳಗಡೆ ಇರುವ ಸಹಿಗಳು ನನ್ನ ತಾಯಿ, ನನ್ನದು ಮತ್ತು ನನ್ನ ತಂಗಿಯ ಸಹಿಗಳು ಎಂದು ಸೂಚಿಸಿದಾಗ ಸಾಕ್ಷಿಯು ಸದರಿ ಸಹಿಗಳನ್ನು ನಿರಾಕರಿಸಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಸಹಿಯನ್ನು ನಿರಾಕರಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಎಸ್-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಸ್ತುತ ದಾವೆಯನ್ನು ಸಲ್ಲಿಸುವಾಗ ನೀಡಿರುವ ವಕಾಲತ್ತ ನಾಮೆಯಲ್ಲಿ ಸಹಿಯನ್ನು ತೋರಿಸಿ ಅದು ಯಾರ ಸಹಿ ಎಂದು ಸೂಚಿಸಿದಾಗ ಸಾಕ್ಷಿಯು ವಕಾಲತ್ತಿನಲ್ಲಿ ಇರುವ ಆರ್.ವಿ ಪಾಟೀಲ ಎಂಬ ಸಹಿಯನ್ನು ತನ್ನದಲ್ಲ ಎಂದು ನಿರಾಕರಿಸಿರುತ್ತಾರೆ. ಸಾಕ್ಷಿಗೆ ನಿ.ಪಿ-12 ರ ರಾಜೀ ಪತ್ರವನ್ನು ತೋರಿಸಿ ಅದರ ಕಡೆಯ ಪುಟದಲ್ಲಿ ಇರುವ ಆರ್.ವಿ ಪಾಟೀಲ ಎಂಬ ಸಹಿಯು ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ.

9. ದಾವಾ ಆಸ್ತಿಯಲ್ಲಿ 1999 ರಿಂದಲೂ ಪ್ರತಿವಾದಿಗಳು ವಾಸವಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2017 ರಿಂದ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. 08-05-1999 ರಲ್ಲಿ ನಾನು ಮತ್ತು ನನ್ನ ತಾಯಿ ನಿಂಬವ್ವ ರವರು ಜಂಟಿಯಾಗಿ ದಾವಾ ಸ ನಂಃ 90 ಅ/6 ರ ಒಟ್ಟು ವಿಸ್ತೀರ್ಣದ ಪೈಕಿ 6 ಗುಂಟೆ ಜಮೀನಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಪರವಾಗಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆವು ಎಂದರೆ ಸರಿಯಲ್ಲ. 1999 ನೇ ಇಸವಿಯಲ್ಲಿ ದಾವಾ ಜಮೀನಿನ ಸ ನಂಃ 90/ಎ ಎಂದು ಇತ್ತು ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿಗೆ ಸಂಬಂಧಿಸಿದಂತೆ 1999 ರಲ್ಲಿ ಪಹಣಿ ಪತ್ರಿಕೆಯನ್ನು ತೆಗೆಸಿ ನೋಡಿದ್ದು, ಅದರ ಸರ್ವೆ ನಂಬರ್ ಮೊದಲಿಗೆ 90/ಎ ಎಂದು ಇರುವುದಿಲ್ಲ. ಸದರಿ ಖರೀದಿ ಕರಾರು ಪತ್ರದ ವ್ಯವಹಾರದ ಸಂದರ್ಭದಲ್ಲಿ ದಾವಾ ಆಸ್ತಿಯಾದ 6 ಗುಂಟೆ ಜಮೀನನ್ನು ರೂ.6,900/- ಗಳಿಗೆ ಮಾರಾಟ ಮಾಡಲು ಒಪ್ಪಿ ಅಂದೇ ಮುಂಗಡ ಹಣವಾದ ರೂ.1,000/- ಪಡೆದುಕೊಂಡು ದಾವಾ ಆಸ್ತಿಯ ಕಬ್ಜೆಯನ್ನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರದಲ್ಲಿ ಉಳಿಕೆ ಹಣವನ್ನು ಪಡೆದುಕೊಂಡು ದಾವಾ ಆಸ್ತಿಯನ್ನು ಸಂಪೂರ್ಣವಾಗಿ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಹೋತನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. 1999 ರಿಂದಲೂ 2007 ವರೆಗೂ ದಾವಾ ಆಸ್ತಿಯಾದ 6 ಗುಂಟೆಯನ್ನು 1 ನೇ ಪ್ರತಿವಾದಿಯು ಕಬ್ಜೆಯಲ್ಲಿ ಇಟ್ಟುಕೊಂಡು ಫಸಲನ್ನು ಬೆಳೆದುಕೊಂಡು ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. 2007 ರಲ್ಲಿ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ನಿ.ಪಿ-2 ರಲ್ಲಿ ಕಾಣುವ ಮನೆಯನ್ನು ಆತನೇ ನಿರ್ಮಿಸಿಕೊಂಡು ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಆತ ಸದರಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ಕಾರಣಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಸದರಿ ಮನೆಗೆ ವಿಪಿಸಿ ಸಂಃ 252 ಎಂಬ ಸಂಖ್ಯೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ವಿಪಿಸಿ ಸಂಖ್ಯೆಯನ್ನು ನಮೂದಿಸಿದ ನಂತರದಿಂದಲೂ

ಇಂದಿನವರೆಗೂ 1 ನೇ ಪ್ರತಿವಾದಿಯೇ ಗ್ರಾಮ ಪಂಚಾಯಿತಿಗೆ ಸೂಕ್ತ ಕರ ಆಕರಣೆಯನ್ನು ಕಟ್ಟುತ್ತಿದ್ದಾನೆ ಎಂದರೆ ಸರಿಯಲ್ಲ. ನಿ.ಪಿ-2 ರಲ್ಲಿ ಕಾಣುವ ಮನೆಗೆ ಸಂಬಂಧಿಸಿದಂತೆ ವಿಪಿಸಿ ಸಂಃ 252 ನ್ನು ನೀಡಲಾಗಿದೆ ಎಂದರೆ ಗೊತ್ತಿಲ್ಲ.

10. ನಿ.ಪಿ-2 ರಲ್ಲಿ ಕಾಣುವ ಮನೆಗೆ ಯಾವ ಸಂಖ್ಯೆಯನ್ನು ನೀಡಲಾಗಿದೆ ಎಂದು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಪ್ರಮಾಣ ಪತ್ರವನ್ನು ಪಡೆದು ಹಾಜರು ಪಡಿಸಿರುತ್ತೇನೆ. ವಿಪಿಸಿ ಆಸ್ತಿಸಂಃ 252 ಸ ನಂಃ 90/ಎ ಜಮೀನಿನಲ್ಲಿ ಇರುವುದರಿಂದ ಉದ್ದೇಶಪೂರ್ವಕವಾಗಿಯೇ ನಾನು ಸಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸ ನಂಃ 90 ಅ/6 ಎಂದು ಯಾವಾಗ ಹಿಸ್ಸಾ ಪೋಡಿ ಆಗಿರುತ್ತದೆ ಎಂದು ಗೊತ್ತಿಲ್ಲ. 1999 ರಲ್ಲಿ ನನ್ನ ಮತ್ತು ನನ್ನ ಸಹೋದರಿಯ ಮದುವೆ ಇದ್ದ ಕಾರಣಕ್ಕೆ ಮದುವೆಯ ಖರ್ಚಿಗಾಗಿ ಮತ್ತು ಮನೆತನದ ಇತರ ಅಡಚಣೆಗಳಿಗಾಗಿ ದಾವಾ ಆಸ್ತಿಯನ್ನು ನನ್ನ ತಾಯಿ ನಿಂಬವ್ವ ರವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವಾಗ ಖರೀದಿ ಕರಾರು ಪತ್ರಕ್ಕೆ ಒಪ್ಪಿ ನನ್ನ ತಾಯಿ, ನಾನು ಮತ್ತು ನನ್ನ ಸಹೋದರಿ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರದ ಅಡಿಯಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಉಳಿಕೆ ಹಣವಾದ ರೂ.5,900/- ಹಣವನ್ನು 1 ನೇ ಪ್ರತಿವಾದಿಯಿಂದ ಪಡೆದುಕೊಂಡು ನಾನು ಮತ್ತು ನನ್ನ ತಾಯಿ ನೇರವಾಗಿ ಸಲ್ಲಿಸಿದ ವರದಿ ಅರ್ಜಿ ಪ್ರಕಾರ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ದಾವಾ ಆಸ್ತಿಯ ಮನೆಗೆ 1 ನೇ ಪ್ರತಿವಾದಿಯ ಹೆಸರನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹತ್ತಿರ ಟ್ರಾಕ್ಟರ್ ಇದೆ ಎಂದರೆ ಸರಿ. ಆತ ತನ್ನ ಬಳಿ ಇರುವ ಟ್ರಾಕ್ಟರ್ ವಾಹನ, ದನ ಕರುಗಳನ್ನು ಕಟ್ಟಲು ಉಪಯೋಗವಾಗುವಂತೆ ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ಟ್ರಾಕ್ಟರ್ ಶೆಡ್ಡನ್ನು ಹಾಕಿ ಮತ್ತು ದನದ ಕೊಟ್ಟಿಗೆಯನ್ನು ನಿರ್ಮಿಸಿ ವಾಸವಾಗಿದ್ದಾನೆ ಎಂದರೆ ಸಾಕ್ಷಿಯು ಅವುಗಳನ್ನು ನಾನೇ ನಿರ್ಮಿಸಿರುತ್ತೇನೆ ಎಂದು ನುಡಿಯುತ್ತಾರೆ.

11. ನಿ.ಪಿ-2 ರ ಛಾಯಾ ಚಿತ್ರದಲ್ಲಿ ಕಾಣುವ ಮನೆಯಲ್ಲಿಯೇ ಖಾಯಂ ಆಗಿ ನಾನು ಮತ್ತು ನನ್ನ ತಾಯಿ ವಾಸವಿದ್ದೆವು ಎಂದು ತೋರಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಹಾಜರುಪಡಿಸಿರುವುದಿಲ್ಲ. ವಾದ ಪತ್ರದಲ್ಲಿ ದಾವಾ ಆಸ್ತಿಯಲ್ಲಿ ಇರುವ ಮನೆಯಲ್ಲಿ ವಾಸವಿದ್ದೆವು ಎಂದು ಬರೆಸಿರುವುದಿಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನೋಟೀಸು ನೀಡಿರುವುದಿಲ್ಲ. ಸಾಕ್ಷಿಯು ಪುನಃ ಮುಂದುವರೆದು ವಕೀಲರ ಮೂಲಕ ಪ್ರತಿವಾದಿಗಳಿಗೆ ನೋಟೀಸನ್ನು ನೀಡಿಸಿದ್ದೇನೆ ಎಂದು ನುಡಿಯುತ್ತಾರೆ.

12. ದಾವಾ ಆಸ್ತಿಯನ್ನು ಪ್ರತಿವಾದಿಗಳಿಗೆ ತಿಂಗಳಿಗೆ ರೂ.1,500/- ಹಣಕ್ಕೆ ಪರವಾನಿಗೆ ಆಧಾರದ ಮೇಲೆ ನೀಡಿದ್ದು, ಅದು ಮೌಖಿಕ ಕರಾರು ಆಗಿರುತ್ತದೆ. ಸದರಿ ಮೌಖಿಕ ಕರಾರು ಆಗುವಾಗ ನಾನು, ನನ್ನ ಗಂಡ, 1 ನೇ ಪ್ರತಿವಾದಿ ಮತ್ತು ಆತನ ಮನೆಯವರು ಇದ್ದರು. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾಸಿಕ ರೂ.1500/- ಗಳಿಗೆ ಪರವಾನಿಗೆ ಆಧಾರದ ಮೇಲೆ ನೀಡಿದ್ದೆವು ಎಂದು ಮತ್ತು ಅದರ ವಿಚಾರವಾಗಿ ಮೌಖಿಕ ಕರಾರು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 08-05-1999 ರಿಂದಲೂ ಇವತ್ತಿನ ದಿನಕ್ಕೂ ಸಹ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಯಾರ ತಕರಾರು ಇಲ್ಲದೇ ಶಾಂತಿಯುತ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಿಪಿಸಿ ಆಸ್ತಿ ಸಂಃ 252 ನನಗೆ ಸಂಬಂಧಿಸಿದ ಆಸ್ತಿ ಆಗಿರುವುದಿಲ್ಲ. ವಿಪಿಸಿ ಆಸ್ತಿ ಸಂಃ 252 ರಲ್ಲಿ ಯಾರು ಕಬ್ಜಾ ವಹಿವಾಟು ಮಾಡುತ್ತಿದ್ದಾರೆಂದು ಗೊತ್ತಿಲ್ಲ. ಆಸ್ತಿ ಸಂಃ 252 ರ ದಾಖಲೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಸಂಃ 252 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ವಿಪಿಸಿ ಆಸ್ತಿ ಸಂಃ 252 ರಲ್ಲಿ ಇರುವ ಮನೆಯಲ್ಲಿ ಪ್ರತಿವಾದಿಗಳು ವಾಸವಿದ್ದು, ಅದರ ಮೇಲೆ ಕರ್ನಾಟಕ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್, ಹಾನಗಲ್ಲ ಶಾಖೆ ಇದರಲ್ಲಿ 1 ನೇ ಪ್ರತಿವಾದಿಯು ಸಾಲ ಪಡೆದಿರುತ್ತಾನೆ ಎಂದರೆ ಗೊತ್ತಿಲ್ಲ.

13. ಹೋತನಹಳ್ಳಿ ಗ್ರಾಮವು ಅರಳೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ವಿಪಿಸಿ ಆಸ್ತಿ ಸಂಃ 252 ಸ ನಂಃ 90/ಎ ಜಮೀನಿನಲ್ಲಿ ಇದ್ದು ಅದರಲ್ಲಿ 1 ನೇ ಪ್ರತಿವಾದಿಯು ಮನೆ ಕಟ್ಟಿಕೊಂಡು ಅದಕ್ಕೆ ವಿದ್ಯುತ್ ಮತ್ತು ನೀರಿನ ಸೌಲಭ್ಯ ಪಡೆದುಕೊಂಡು ವಾಸವಿದ್ದಾನೆ ಎಂದು ದೃಢೀಕರಣ ಪತ್ರವನ್ನು ಅರಳೇಶ್ವರ ಗ್ರಾಮ ಪಂಚಾಯಿತಿ ಅಧಿಕಾರಿಯು ನೀಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಯಾರಾದರೂ ಬರೆಸಿಕೊಂಡು ಬರಬಹುದು ಎಂದು ನುಡಿಯುತ್ತಾರೆ. ವಿಪಿಸಿ ಆಸ್ತಿ ಸಂಃ 252 ಸ ನಂಃ 90/ಎ ಜಮೀನಿನಲ್ಲಿ ಪ್ರತಿವಾದಿಯೇ ಮನೆ ಕಟ್ಟಿಕೊಂಡು ವಾಸ ಇರುವ ಕಾರಣಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಕರ ಆಕರಣೆ ಯಾದಿಯನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತದಾರರ ಪಟ್ಟಿಯು ನಾನು ವಾಸವಿದ್ದ ಹಳೆಯ ಮನೆಯ ವಿಳಾಸಕ್ಕೆ ಇದೆ ಎಂದರೆ ಸರಿ. ನನ್ನ ಗಂಡ ಸದರಿ ಗ್ರಾಮ ಪಂಚಾಯಿತಿ ಯಲ್ಲಿ 5 ವರ್ಷಗಳವರೆಗೆ ಅಧ್ಯಕ್ಷರು ಇರುವುದರಿಂದ ಆಸ್ತಿ ಸಂಃ 252 ರ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಗೊತ್ತಿಲ್ಲ. ದಿಃ 08-05-1999 ರಿಂದಲೂ 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ವ್ಯತಿರಿಕ್ತ ಸ್ವಾಧೀನದ ಮೇಲೆ ಮಾಲೀಕನು ಇರುತ್ತಾನೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನೀಡಿರುವ ನೋಟೀಸಿಗೆ ಉತ್ತರವಾಗಿ 1 ನೇ ಪ್ರತಿವಾದಿಯು ಪ್ರತ್ಯುತ್ತರ ನೋಟೀಸನ್ನು ನೀಡಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಆ ರೀತಿಯ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಕ್ರಯದ ಕರಾರಿನ ಅಡಿಯಲ್ಲಿ ದಾವಾ ಆಸ್ತಿಯ ಕಬ್ಜಾ ವಹಿವಾಟು ಮಾಡುತ್ತಿರುವುದರಿಂದ ಅದನು ಬಿಡಿಸಿಕೊಳ್ಳಲು ತೊಂದರೆ ಆಗುತ್ತದೆ ಎಂದು ತಿಳಿದು 2017 ರಿಂದ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಪರವಾನಿಗೆ ಆಧಾರದ ಮೇಲೆ ಮೌಖಿಕ ಕರಾರಿನ ಮೇಲೆ ನೀಡಿರುತ್ತೇವೆ ಎಂದು ಸುಳ್ಳು ಸಂಗತಿಗಳನ್ನು ಆಧರಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

14. 1 ನೇ ಪ್ರತಿವಾದಿಯ ಹೆಸರಿನಲ್ಲಿ ವಿಪಿಸಿ ಆಸ್ತಿ ಸಂಃ 252 ಖಾತೆ ಆದ ಬಗ್ಗೆ ಕಾನೂನುಬದ್ದ ಇರುವುದಿಲ್ಲ ಎಂದ ಪ್ರಶ್ನಿಸಿ ಅದನ್ನು ಕಡಿಮೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ಗ್ರಾಮ ಪಂಚಾಯಿತಿಯಲ್ಲಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಅರ್ಜಿಯನ್ನು ಒಂದು ವರ್ಷದ ಹಿಂದೆ ನೀಡಿರುತ್ತೇನೆ. ನಾನು ಸಲ್ಲಿಸಿದ ಅರ್ಜಿಯ ಮೇಲೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಲವಾರು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ವಿರುದ್ದವೂ ಸಹ ಒಂದು ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದರೆ ಸರಿ. ದಾವಾ ಜಮೀನಿಗೆ ಸಂಬಂಧಿಸಿದಂತೆ ನನ್ನ ಗ್ರಾಮದ ಕಲ್ಲಪ್ಪ ಎಂಬುವವರು ನನ್ನ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದಾಗಲೂ ಸಹ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ವಿಪಿಸಿ ಆಸ್ತಿ ಸಂಃ 252 ರ ಖಾತೆಯನ್ನು ರದ್ದುಗೊಳಿಸುವಂತೆ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ದುರಾಸೆಗೆ ಬಿದ್ದು ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ನಿರ್ಮಿಸಿ ವಾಸವಾಗಿರುವ ಮನೆಯನ್ನು ಹೇಗಾದರೂ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಇಂದಿನ ಮಾರುಕಟ್ಟೆ ಬೆಲೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಾದ 6 ಗುಂಟೆ ಜಮೀನು ಮತ್ತು ಅದರಲ್ಲಿ ಇರುವ ಮನೆಯ ಒಟ್ಟು ಮೌಲ್ಯ ರೂ. 10,00,000/-ಗಳು ಆಗುತ್ತದೆ ಎಂದರೆ ಗೊತ್ತಿಲ್ಲ. ನಾನು ದಾವಾ ಆಸ್ತಿಗೆ ಯಾವ ರೀತಿಯಲ್ಲೂ ಮಾಲೀಕಳಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 718/2002 ರ ದಾವೆಯಲ್ಲಿ ರಾಜೀ ಆಗುವ ಪೂರ್ವದಲ್ಲಿಯೇ ದಾವಾ ಆಸ್ತಿಯನ್ನು ನಾನು, ನನ್ನ ತಾಯಿ ಮತ್ತು ತಂಗಿ ಒಟ್ಟಿಗೆ ಸೇರಿ ಮಾರಾಟ ಮಾಡಿರುವುದರಿಂದ ನಾನು ದಾವಾ ಆಸ್ತಿಯ ಮಾಲೀಕಳು ಅಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನನ್ನು ದಾವಾ ಆಸ್ತಿಯ ಮಾಲೀಕಳು ಎಂದು ಘೋಷಣೆ ಮಾಡಲು ಪರಿಹಾರವನ್ನು ಕೋರಿರುತ್ತೇನೆ.

ಪ್ರತಿವಾದಿಗಳಿಗೆ ಆಗದವರ ಮಾತನ್ನು ಕೇಳಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ವ್ಯತಿರಿಕ್ತ ಸ್ವಾಧೀನತೆಯ ಆಧಾರದ ಮೇಲೆ ದಾವಾ ಆಸ್ತಿಯ ಮಾಲೀಕನು ಇರುವುದರಿಂದ ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ದಿಃ 08-05-1999 ರ ಖರೀದಿ ಕರಾರಿನಂತೆ ಕ್ರಯ ಪತ್ರದಂತೆ ಕ್ರಯ ಪತ್ರವನ್ನು ಬರೆದುಕೊಂಡುವಂತೆ ಹಲವಾರು ಬಾರಿ 1 ನೇ ಪ್ರತಿವಾದಿಯು ನನ್ನನ್ನು, ನನ್ನ ತಾಯಿ ಮತ್ತು ಸಹೋದರಿಯನ್ನು ಕೇಳಿಕೊಂಡರೂ ಸಹ ಬರೆದು ಕೊಡದೇ ದಾವಾ ಆಸ್ತಿಯಲ್ಲಿ ಈಗಾಗಲೇ ನೀನು ಮನೆಯನ್ನು ಕಟ್ಟಿಕೊಂಡಿರುವುದರಿಂದ ಖರೀದಿ ಪತ್ರವನ್ನು ಬರೆದುಕೊಡುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ